ಮಾತಾಡ್ತಿದ್ದೀವಿ. ವೈಯಕ್ತಿಕ ಪ್ರಶ್ನೆ ಕೇಳಬಾರದು ಅಂತ ಬುದ್ಧಿ ಬೇಡ ನಿಮಗೆ? ಎಲ್ಲಿ ಹಾಳಾಗಿ ಹೋಗಿದ್ದೀರಿ ಮಧುಸೂದನ್? ಎಂಥ ಪ್ರಶ್ನೆಗಳನ್ನು ತೊಗೊಬೇಕಂತ ನನ್ನ ಜೊತೆ ಹತ್ತುವರ್ಷಗಳಿಂದ ಕೆಲಸ ಮಾಡುತ್ತಿದ್ದರೂ ಇನ್ನೂ ಗೊತ್ತಾಗಿಲ್ಲವಲ್ಲ ರೀ. ಮುಂದಿನ ಪ್ರಶ್ನೆಗೆ ಕನೆಕ್ಟ್ ಮಾಡಿ ಬೇಗ' ಎಂದು ಕರವಸ್ತ್ರದಿಂದ ಧಾರಾಕಾರವಾಗಿ ಸುರಿಯುತ್ತಿದ್ದ ಬೆವರನ್ನು ಒರೆಸಿಕೊಳ್ಳುತ್ತ ಶಂಕ್ರಣ್ಣ ವ್ಯಂಗ್ಯಮಿಶ್ರಿತ ಮುಗುಳ್ನಗೆಯ ನೋಟವನ್ನು ಚಂದ್ರುನತ್ತ ಹರಿಸಿದರು. ಇದು ಯಾವುದೂ ಅರ್ಥವಾಗದೆ ಪೆಕರು ನೋಟ ಬೀರುತ್ತ ಕುಳಿತಿದ್ದ ಚಂದ್ರು ಹರಕೆಗೆಂದು ಬಲಿಕೊಡಲು ಸಿದ್ಧವಾದ ಕುರಿಯಂತೆ ಶಂಕ್ರಣ್ಣನ ಕಣ್ಣಿಗೆ ಗೋಚರಿಸಿದ.

* * *

ತನ್ನ ಪಿಎಚ್.ಡಿ ಗೈಡ್ ಪ್ರೊಫೆಸರ್ ನೀಲಾಂಜನ ಮತ್ತು ಅವರ ಪಟಾಲಂ ಜೊತೆಗೆ ಊರಿನ ಏಕೈಕ ಗ್ರಾಜ್ಯುಏಟ್ ಎಂಬ ಅಭಿಮಾನಕ್ಕೆ ಪಾತ್ರನಾಗಿದ್ದ ಪರಮಸಿದ್ಧ ಬಸ್ಸಿನಿಂದಿಳಿದಾಗ ಸಮಯ ಮಧ್ಯಾಹ್ನ ಮೂರುಗಂಟೆಯಾಗಿತ್ತು. ಪತ್ರಿಕೆಗಳಲ್ಲಿ ಸುದ್ದಿಯಾಗಿ ಈಗಿರುವ ಹುದ್ದೆಗಿಂತ ಎತ್ತರಕ್ಕೇರಬೇಕೆಂದು ಮನಸಿನಲ್ಲೆ ಮಂಡಿಗೆ ತಿನ್ನುತ್ತಿದ್ದ ತನ್ನ ಗೈಡ್‌ಗೆ ಚಂದ್ರುನ ಪ್ರೇಮಪ್ರಕರಣಕ್ಕಿಂತ ಉತ್ತಮವಾದ ಬೇರೊಂದು ಅವಕಾಶ ಸಿಗುವುದಿಲ್ಲ ಎಂದು ಭಾವಿಸಿ ಪರಮಸಿದ್ಧ ಪ್ರೊಫೆಸರ್ ನೀಲಾಂಜನರನ್ನು ಊರಿಗೆ ಕರೆತಂದಿದ್ದ. ದಿಲ್‌ಖುಷ್ ಪಾನ್‌ಶಾಪ್ ಬಾಗಿಲು ಮುಚ್ಚಿದ್ದು ಚಂದ್ರುನನ್ನು ಕಾಣಬೇಕೆಂಬ ಅವರ ಆಸೆಗೆ ತಣ್ಣೀರೆರಚಿದಂತಾಯಿತು. ಪರಮಸಿದ್ಧ ಬಸ್‌ಸ್ಟಾಪ್‌ನಲ್ಲಿದ್ದ ಒಂದಿಷ್ಟು ಜನರನ್ನು ಕೂಡಿಸಿ ಪಾನ್‌ಶಾಪ್ ಎದುರಿನ ಕಟ್ಟೆಯನ್ನೆ ವೇದಿಕೆಯಾಗಿಸಿ ಪ್ರೊಫೆಸರ್ ನೀಲಾಂಜನರ ಭಾಷಣಕ್ಕೆ ಸಿದ್ಧತೆ ಮಾಡಿದ. ಗಾಂಧಿ, ಕಾರ್ಲ್ ಮಾರ್ಕ್ಸ್, ಬಸವಣ್ಣ, ಅಂಬೇಡ್ಕರ್‌ರನ್ನು ತಮ್ಮ ಭಾಷಣದಲ್ಲಿ ಹೆಸರಿಸುತ್ತ ಆಗಾಗ ಕಮೂ, ಕಾಫ್ಕಾರ ಹೇಳಿಕೆಗಳನ್ನು ಉಲ್ಲೇಖಿಸುತ್ತ ಮಾತನಾಡುತ್ತಿದ್ದ ನೀಲಾಂಜನರನ್ನು ಊರಿನ ಜನ ಅನ್ಯಗ್ರಹದಿಂದ ಬಂದ ವಿಚಿತ್ರ ಜೀವಿ ಎನ್ನುವಂತೆ ನೋಡತೊಡಗಿದರು. ಜಾತಿ, ಅಂತಸ್ತು ನಾಶವಾಗಿ ಸಮಾನತೆ ಬರಬೇಕು, ಚಂದ್ರುನ ಪ್ರೀತಿ ಗೆಲ್ಲಬೇಕು ಎನ್ನುತ್ತ ತಮ್ಮ ಬೆನ್ನಹಿಂದಿರುವ ಪಟಾಲಂ ಕಡೆ ದೃಷ್ಟಿ ಹರಿಸಿದ್ದೆ ಅರ್ಥವಾದವರಂತೆ ಅವರು ಚಪ್ಪಾಳೆಯ ಸುರಿಮಳೆ ಗೈಯುತ್ತಿದ್ದದ್ದು ಜನರಿಗೆ ಪುಕ್ಕಟೆ ಮನರಂಜನೆ ಒದಗಿಸುತ್ತಿತ್ತು. ಚಂದ್ರುನ ಪ್ರೀತಿಗೆ ಬೆಂಬಲ ಕೊಡಲು ತಾವು ರಾತ್ರಿವರೆಗೂ ನಿರಶನ ಕೂಡುವುದಾಗಿ ಘೋಷಿಸಿ ಪ್ರೊಫೆಸರ್ ನೀಲಾಂಜನ ದಿಲ್‌ಖುಷ್ ಎದುರಿನ ಕಟ್ಟೆಯ ಮೇಲೆ ಪ್ರತಿಷ್ಠಾಪನಗೈದರು. ಪಟಾಲಂ ಗುರುಗಳ ಪಾದದ ಬಳಿ ಬೀಡು ಬಿಟ್ಟಿತು. ಜೊತೆಗೆ ಬಂದಿದ್ದ ವರದಿಗಾರರು ಒಂದೆರಡು ಫೋಟೊ ಕ್ಲಿಕ್ಕಿಸಿ ನಾಳೆ ಪತ್ರಿಕೆಯಲ್ಲಿ ವರದಿ ಮಾಡುವ ಆಶ್ವಾಸನೆ ಕೊಟ್ಟು ನಗರಕ್ಕೆ ಹಿಂದಿರುಗಿದರು.

ನೀಲಾಂಜನರ ಬೆಂಬಲ, ಮುಷ್ಕರ ಇದೆಲ್ಲ ಬರೀ ನಾಟಕ. ಖಾಲಿಯಾಗುತ್ತಿರುವ ವೈಸ್‌ಚಾನ್ಸಲರ್ ಹುದ್ದೆಯನ್ನು ಲಪಟಾಯಿಸುವುದೇ ಅವರ ಈ ಹೋರಾಟದ ಹಿಂದಿರುವ ನಿಜವಾದ ಮಸಲತ್ತೆಂದು ಪರಮಸಿದ್ಧನ ಬುದ್ಧಿಗೆ ಹೊಳೆಯದೇ ಇರಲಿಲ್ಲ. ಪ್ರೊಫೆಸರ್ ನೀಲಾಂಜನ ಮತ್ತು ಅವರ ಪಟಾಲಂ ರಾತ್ರಿಯಾಗುತ್ತಿದ್ದಂತೆ ಪರಮಸಿದ್ಧನ ತೋಟದ ಮನೆಗೆ ಸ್ಥಳಾಂತರಗೊಂಡು ಪಾನಗೋಷ್ಠಿಯಲ್ಲಿ ಅಮಲೇರಿಸಿಕೊಂಡು ಬಾಡೂಟ ಸವಿದು ಬಾಡಿಗೆ ಕಾರಿನಲ್ಲಿ ಊರಿಗೆ ಮರಳಿತು.

ಇದಕ್ಕೆಲ್ಲ ಹಣ ಹೊಂದಿಸಲು ಪರಮಸಿದ್ಧ ತನ್ನ ಅಪ್ಪನಿಗೆ ಗೊತ್ತಾಗದಂತೆ ಮಸಲತ್ತು ಮಾಡಿದ್ದ. ಹಿಂದಿನ ದಿನವೇ ಕುರಿಮಂದೆಯಿಂದ ನಾಲ್ಕು ಕುರಿಗಳನ್ನು ಕದ್ದೊಯ್ದು ಕಲಬುರಗಿಯ ಶನಿವಾರದ ಸಂತೆಯಲ್ಲಿ ಮಾರಾಟ ಮಾಡಿದ್ದನ್ನು ಅವರಪ್ಪ ಸಾಯುವವರೆಗೂ ಆ ಕುರಿಗಳು ತೋಳಗಳಿಗೋ ಇಲ್ಲ ಕಳ್ಳಕಾಕರ ಬಾಡೂಟಕ್ಕೊ ಬಲಿಯಾಗಿವೆಯೆಂದೇ ಬಲವಾಗಿ ನಂಬಿದ್ದ.

* * *

'ರ್ರೀ ಅಂದಾನಪ್ಪ ಊರಲ್ಲಿ ಅದೇನೋ ಗಲಾಟೆ ಆಗಿದೆಯಂತಲ್ಲರಿ. ನಿಮ್ಮದೇ ಮತಕ್ಷೇತ್ರಕ್ಕೆ ಸೇರಿದ ಊರದು. ಪಡ್ಡೆಹೈದ ಲವ್ ಲೆಟರ್ ಬರೆಯೋದು, ಅದು ಪತ್ರಿಕೆ ಮತ್ತು ಟೀವಿಯಲ್ಲಿ ಸುದ್ದಿ ಆಗೋದು, ಆ ಯೂನಿವರ್ಸಿಟಿ ಪ್ರೊಫೆಸರ್ ಮುಷ್ಕರ ಹೂಡೋದು ಏನ್ರೀ ಇದೆಲ್ಲ. ಇನ್ನು ಇಪ್ಪತ್ನಾಲ್ಕು ಗಂಟೆಗಳಲ್ಲಿ ಇದು ಸರಿಹೋಗಬೇಕು. ಏನು ಮಾಡ್ತಿರೋ ನನಗೆ ಗೊತ್ತಿಲ್ಲ' ಮಂತ್ರಿ ರೇಣುಕಪ್ಪನವರು ಎಂ.ಎಲ್.ಎ